73201

Sl.No.

MB-351

Total No. of Pages : 4

# ಮೊದಲನೆಯ ಚತುರ್ಮಾಸ ಬಿ.ಎ./ಬಿ.ಎಸ್.ಡಬ್ಲ್ಯೂ/ಬಿ.ಎಫ್.ಎ. (ಲಲಿತ ಕಲೆ) ಬಿ.ಪಿ.ಎ. (ದೃಶ್ಯ ಕಲೆ) ಪರೀಕ್ಷೆ, ಮಾರ್ಚ್–2023

(ಸ್ಕೀಮ್ : ಸಿಬಿಸಿಎಸ್)

## ಕನ್ನಡ ಭಾಷೆ (ಪತ್ರಿಕೆ–೧)

## ಕಲಾ ಗಂಗೋತ್ರಿ–೧

**ಸಮಯ: 3 ಗಂಟೆಗಳು** **ಗರಿಷ್ಠ ಅಂಕಗಳು : 80**

***ಸೂಚನೆ:*** *'ಅ' ವಿಭಾಗ–2019–20 ಮತ್ತು 20–21 ರ ವಿದ್ಯಾರ್ಥಿಗಳಿಗೆ. 'ಆ' ವಿಭಾಗ–2018–19 ನೇ ಸಾಲಿನ ವಿದ್ಯಾರ್ಥಿಗಳಿಗೆ.*

### ವಿಭಾಗ–ಅ

### ಕಲಾಗಂಗೋತ್ರಿ–೧ : ಕಾವ್ಯಭಾಗ (50 ಅಂಕಗಳು)

*ಪ್ರ1)* ಅ) ಒಂದು ಪದ್ಯ ಭಾಗದ ಭಾವವನ್ನು ಸಂದರ್ಭ ಸಹಿತ ವಿವರಿಸಿ: [5]

೧) ಅಯ್ಯಾ
ನೀನೇನೂ ದೇವರಲ್ಲ
ಆದರೆ ದೇವರನ್ನು ಬಲವಾಗಿ ನಂಬಿದವನು.
ದಂತ ಇಲ್ಲದಿದ್ದರೂ
ಬದುಕಿದ್ದ ಕಾಲದಲ್ಲೆ ದಂತ ಕಥೆಯಾದವನು.
ಈ ನೆಲದ ಕತ್ತಲೆಗೆ, ಬೆತ್ತಲೆಗೆ ಸ್ಪಂದಿಸಿದವನು:
ನೋವು ತಾಳಲಾರದೆ ಅರೆಬೆತ್ತಲಾದವನು.
ಹತ್ತಿರ ಬಂದವರನ್ನು ಮಗುನಗೆಯಲ್ಲಿ ಬಂಧಿಸಿದವನು.

೨) ಹೇಗೆ ಸಹಿಸಿದೆ ತಾಯೀ
ಹೇಗೆ ಸಹಿಸಿದೆ ?
ಇರುಳು ಹಗಲು ಎವೆ ಮುಚ್ಚದೆ
ಲಂಕೆಯ ದೆವ್ವ ಬನದಲ್ಲಿ
ಹೆದರಿ ಗೂಡಾಗಿ ಕುಳಿತು
ಕಾದ ಮೌಲ್ಯಗಳು

https://www.uomonline.com

ಆ) ಒಂದು ವಾಕ್ಯದಲ್ಲಿ ಉತ್ತರಿಸಿ: [5×1=5]

೧) ಜೀವದಾತೆ, ವಿಶ್ವರೂಪಿಣಿ ಎಂದು ಯಾರನ್ನು ಕರೆಯಲಾಗಿದೆ?

೨) ನವ್ಯಕಾವ್ಯದ ಯುಗ ಪ್ರವರ್ತಕ ಯಾರು?

೩) ಜಿ.ಎಸ್.ಎಸ್ ಎಂದೇ ಖ್ಯಾತರಾದವರು ಯಾರು?

೪) ಧಾಂಡಿಗನಾಯಿ ಗಬಕ್ಕನೆ ತಿಂದದ್ದು ಏನನ್ನು?

೫) 'ಈ ರಾತ್ರಿ ಬುದ್ಧನಿಗಾಗಿ'-ಕವನದ ಕರ್ತೃ?

ಪ್ರ2) ಮೂರು ವಾಕ್ಯಗಳನ್ನು ಸಂದರ್ಭ ಸಹಿತ ವಿವರಿಸಿ: [3×4=12]

೧) ಸತ್ತ ಕಲ್ಲಗಳ ಮುಂದೆ ಅತ್ತು ಕರೆದುದು ಸಾಕು.

೨) ವಾನರನ ಮಾಡಮಾಡುತ್ತಲಿ ವಿನಾಯಕನ ಮಾಡಿ ಬಿಟ್ಟಿರು ಸರಿಯೆ.

೩) ಕೈ ಗೆಟುಕದ ರೊಟ್ಟಿಯ ಚೂರಾಗಿದೆ ಚಂದಿರ ಬಾನಿನ ತಟ್ಟೆಯಲಿ.

೪) ಬಣ್ಣ ಬಣ್ಣದ ಮೂಡಣದ ಮಾಂಸದಂಗಡಿ ತೆರೆದಾಗ ನನ್ನೂರಿನಲಿ ಬೆಳಗಾಯಿತು.

೫) ಒಂದು ಕೈಯಲ್ಲಿ ರೊಟ್ಟಿ ಇನ್ನೊಂದು ಕೈಯಲ್ಲಿ ಕೋವಿ.

ಪ್ರ3) ಅ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ: [2×2=4]

ಬಂಗಾರದ ಮೊಟ್ಟೆಕೋಳಿ, ಶ್ರೀಕೃಷ್ಣ ಆಲನಹಳ್ಳಿ, ಮಹಾತ್ಮ.

ಆ) ಒಂದು ವಿಷಯವನ್ನು ಕುರಿತು ಸ್ವಂತ ಅಭಿಪ್ರಾಯವನ್ನು ಬರೆಯಿರಿ. [4]

೧) ಯುದ್ಧದ ಘೋರ ಪರಿಣಾಮಗಳು.

೨) ಗ್ರಾಮ ಜೀವನದ ವಿಶೇಷತೆ.

ಪ್ರ4) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) 'ಇಂದಿನ ದೇವರು' ಕವನದ ವೈಚಾರಿಕ ಚಿಂತನೆಗಳೇನು?

೨) 'ನಿರಂತರವಾಗಿ ಅಳುತ್ತಿರುವ ಮಗು, ನೆಮ್ಮದಿಯ ಬದುಕನ್ನು ಹಂಬಲಿಸುತ್ತಿರುವ ಮಾನವತೆಯ ಪ್ರತೀಕ'-ಚರ್ಚಿಸಿ. https://www.uomonline.com

ಪ್ರ5) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ: [2×5=10]

೧) ಕೈಗೆ ಸಿಕ್ಕಿದ್ದನ್ನು ನಾಶ ಮಾಡುವ ತಮ್ಮನ ದಮನಕಾರಿ ಪ್ರೌವೃತ್ತಿ.

೨) 'ಬೆಳಗು' ಕವಿತೆಯ ಬಂಡಾಯ ಪ್ರಜ್ಞೆ.

೩) 'ಪರಂಪರೆ' ಕವಿತೆಯಲ್ಲಿನ ಸ್ತ್ರೀ ಸಂವೇದನೆ.

೪) ಬದುಕನ್ನು ಬೆಳಗಿಸಬಲ್ಲ ಅಕ್ಷರದ ಶಕ್ತಿ

**ಗದ್ಯಭಾಗ (30 ಅಂಕಗಳು)**

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಸ್ವರಾಜ್ಯ ಚಳವಳಿಯನ್ನು ಹಿನ್ನೆಲೆಯಾಗಿಟ್ಟುಕೊಂಡ 'ಗಿರಿಜವ್ವನ ರೊಟ್ಟಿ' ಕಥೆಯನ್ನು ವಿಶ್ಲೇಷಿಸಿ.

೨) 'ಒಂದು ಖಾಸಗಿ ಪತ್ರ' ಕತೆಯು ಮಹಿಳಾ ಲೋಕದ ಸೂಕ್ಷ್ಮ ಅವಲೋಕನ ತೆರೆದಿಟ್ಟಿರುವ ಬಗೆಯನ್ನು ವಿವರಿಸಿ.



https://www.uomonline.com

[10]

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ:

೧) ಸಾಮಾಜಿಕ ಸಮಸ್ಯೆ ಹಾಗೂ ಸಂಘರ್ಷಗಳಿಗೆ ಆಹಾರ ಸಂಸ್ಕೃತಿಯೇ ಕಾರಣವಾಗಿದೆ ಎಂಬುದನ್ನು 'ಮಸಾಲೆದೋಸೆ' ಪ್ರಬಂಧದ ಹಿನ್ನೆಲೆಯಲ್ಲಿ ಚರ್ಚಿಸಿ.

೨) 'ಎದೆಗೆ ಬಿದ್ದ ಅಕ್ಷರ' ಲೇಖನದ ವೈಚಾರಿಕ ಚಿಂತನೆಗಳನ್ನು ಪಟ್ಟಿಮಾಡಿ.

[2×5=10]

ಪ್ರ8) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ:

೧) ಡಾ. ರಾಜ್‌ಕುಮಾರ್ ಅವರ ಕಾಯಕ ನಿಷ್ಠೆ.

೨) 'ಗಿರಿಜವ್ವನ ರೊಟ್ಟಿ' ಕಥೆಯ ದುಗ್ಗಪ್ಪ ಮತ್ತು ಗುರು ಬಸಪ್ಪ.

೩) ದೇವನೂರು ಮಹಾದೇವ ಅವರ ಬೇಸಾಯದ ಹೊಸ ಸಾಧ್ಯತೆಗಳು.

೪) 'ಮಾಸಾಲೆದೋಸೆ' ಪ್ರಬಂಧದ ಹಾಸ್ಯ ಮತ್ತು ವಿಡಂಬನೆ.

## ವಿಭಾಗ-ಆ

**ಸೂಚನೆ : 2018-19ನೇ ಸಾಲಿನ ಸಿ.ಬಿ.ಸಿಎಸ್. ವಿದ್ಯಾರ್ಥಿಗಳಿಗೆ**

**ಹೊಸಗನ್ನಡ ಸಾಹಿತ್ಯ ಸಂಪುಟ-೧ ಕಾವ್ಯ ಭಾಗ-(50 ಅಂಕಗಳು)**

[5]

ಪ್ರ1) ಒಂದು ಪದ್ಯ ಭಾಗದ ಭಾವವನ್ನು ಸಂದರ್ಭ ಸಹಿತ ವಿವರಿಸಿ:

೧) ಬೇನೆವಸಿರಿನಿಂದ ಚಿಮ್ಮಿ,
ದಾಸ್ಯಶಿಲೆಯನೊಡೆದು ಹೊಮ್ಮಿ,
ಶ್ರೀಮಂತರ ಕೊಳಕ ಬಿಚ್ಚಿ,
ಹಳತನೆಲ್ಲ ಕೊಚ್ಚಿ ಕೊಚ್ಚಿ
ನೋಡು, ನುಗ್ಗಿ ಬರುತಿದೆ!

೨) ದೇವರದೊಂದು
ಗೋರಿಯ ಕಟ್ಟಿ,
ಧರ್ಮದ ಧೂಪಕೆ
ಬೆಂಕಿಯನಿಕ್ಕಿ,
ಗಣಗಣ ಬಾರಿಸಿ
ಪ್ರಾಣದ ಗಂಟೆಯ,
ಸಾವಿನ ನೋವಿಗೆ
ಕಲಮಲವೆದ್ದು
ನೆಲವನ್ನೆಲ್ಲಾ
ತತ್ತುವೆನೆಂದು
ಗದುರುತ್ತಿಹುದು.

[5×1=5]

ಪ್ರ2) ಒಂದು ವಾಕ್ಯದಲ್ಲಿ ಉತ್ತರಿಸಿ:

೧) ಅಗಸ್ತ್ಯನ ತಪದ ಮನೆ ಯಾವುದು?

೨) 'ಪ್ರಥಮ ರಾಜನಿಗೆ' ಕವಿತೆ ಬರೆದವರು ಯಾರು?

೩) ಕಾಡ ಬೇಡರ ಹುಡುಗನ ಹೆಬ್ಬೆರಳನ್ನು ಕೇಳಿದವರು ಯಾರು?

೪) ಗುಡಿಯ ಕೆಂಗಲ್ಲಿನಡಿ ಯಾರ ಬುದ್ಧಿ ಜಜ್ಜಿ ಪುಡಿಯಾಗಿದೆ?

೫) ಜಾನಕಿ ಅವರ ಕಾವ್ಯನಾಮ ಯಾವುದು?



https://www.uomonline.com

ಪ್ರ3) ಈ ಕೆಳಗಿನ ನಾಲ್ಕು ವಾಕ್ಯಗಳನ್ನು ಸಂದರ್ಭಸಹಿತ ವಿವರಿಸಿ: [4×5=20]

೧) ಒಮ್ಮತವು ಒಗ್ಗಟ್ಟು ಒಂದೇ ಮನವು ಎಲ್ಲಿದೆ ಹೇಳಿರಿ?

೨) ಬೆರಳನು ಕೊಟ್ಟು ದೊಡ್ಡವನಾದ ಅವನು!

೩) ಎಸೆಯುತಿವೆ ಪ್ರತಿಕ್ಷಣವು ಸರಳ ವೃದ್ಧಾಪ್ಯಕ್ಕೆ ಹಿರಿಸವಾಲು

೪) ಅವಳ ನಾಗರಿಕತೆಗಳ ಮೇಲೆ ಕಾಣುತ್ತಿದೆ ನಿಮ್ಮದೆ ಕ್ರೂರ ಮುದ್ರೆ

೫) ಪುಟ್ನಂಜೀನ ಕೈ ಇಡಿದೋನು ನೀನೆ ಬಲೆ! ಬೂಪ!

೬) ಜುಟ್ಟು ಜನಿವಾರದಲಿ ಧರ್ಮವಿಲ್ಲ.

ಪ್ರ4) ಒಂದು ಪ್ರಶ್ನೆಗೆ ಉತ್ತರಿಸಿ:

೧) ಕೊಡಗಿನ ಸಂಸ್ಕೃತಿ, ಚರಿತ್ರೆ, ನೈಸರ್ಗಿಕ ಮಹತ್ವ, 'ಹುತ್ತರಿ ಹಾಡು' ಕವಿತೆಯಲ್ಲಿ ಹೇಗೆ ಬಣ್ಣನೆಯಾಗಿದೆ ವಿಶ್ಲೇಷಿಸಿ. [10]

೨) 'ನನ್ನ ಅವತಾರ' ಕವಿತೆಯ ಪ್ರಧಾನ ಆಶಯವನ್ನು ಚರ್ಚಿಸಿ.

ಪ್ರ5) ಒಂದು ಪ್ರಶ್ನೆಗೆ ಉತ್ತರಿಸಿ:

೧) ಮಾನವನ ಹಸಿವಿನ ದಾರುಣತೆ 'ತುತ್ತಿನ ಚೀಲ' ಕವಿತೆಯಲ್ಲಿ ಹೇಗೆ ಚಿತ್ರಿತಗೊಂಡಿದೆ? ವಿವರಿಸಿ. [10]

೨) ಮಾಸ್ತಿಯವರ ವ್ಯಕ್ತಿ ಚಿತ್ರಣ 'ಮಾಸ್ತಿ' ಕವಿತೆಯಲ್ಲಿ ಹೇಗೆ ನಿರೂಪಿತವಾಗಿದೆ ವಿವರಿಸಿ.

## ಸಣ್ಣ ಕಥೆಗಳು (ಅಂಕಗಳು-30)

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ:

೧) 'ಅಮಾಸ' ಕಥೆಯ ಅಮಾಸನ ಪಾತ್ರ ಚಿತ್ರಣದೊಂದಿಗೆ ಕಥಾ ವಸ್ತುವನ್ನು ವಿಶ್ಲೇಷಿಸಿ. [10]

೨) ಗ್ರಾಮೀಣ ಬದುಕಿನ ತಲ್ಲಣಗಳು 'ಮಣ್ಣು ಸೇರಿತು ಬೀಜ' ಕಥೆಯಲ್ಲಿ ಹೇಗೆ ಮೂಡಿ ಬಂದಿದೆ ವಿಶ್ಲೇಷಿಸಿ.

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ:

೧) ಅಲ್ಪಸಂಖ್ಯಾತ ಸಮುದಾಯದ ಸ್ತ್ರೀಯರ ಸ್ಥಿತಿಗತಿಯನ್ನು 'ಖತೀಜಾಬಿ' ಹೋರಾಟದೊಂದಿಗೆ ವಿವರಿಸಿ. [10]

೨) ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ ನಿರೂಪಕಿಯ ಪ್ರಶ್ನೆಗಳನ್ನು ಕಥೆಯೊಂದಿಗೆ ವಿಶದಪಡಿಸಿ.

ಪ್ರ8) ಎರಡು ವಿಷಯಗಳನ್ನು ಕುರಿತು ಸಂಕ್ಷಿಪ್ತವಾಗಿ ಉತ್ತರಿಸಿ: [2×5=10]

೧) 'ಕ್ರಿಸ್ತನಲ್ಲ ಪಾದ್ರಿಯ ಮಗಳು' ಕಥೆಯಲ್ಲಿನ ದುರಂತ ಚಿತ್ರಣ.

೨) ಕುರಿಯಯ್ಯನ ನೆನಪಿನಾಳದ ಮಾರಿಹಬ್ಬವನ್ನು ವಿವರಿಸಿ.

೩) 'ಕರೀಂ ಸಾಬನ' ನಡೆಯನ್ನು ಚರ್ಚಿಸಿ.

೪) ನಾಗಮ್ಮನ ಪಾತ್ರ ಚಿತ್ರಣ.

● ● ●



https://www.uomonline.com